# ಮತ್ತೆ ತಡವಿಕೊಂಡ ಕರುಳಬಳ್ಳಿ

ಮಾರ್ಕೋನ ಇಂಥ ವಿಚಾರಗಳನ್ನು ತಿಳಿದು ನನಗೆ ದುಃಖವಾಯಿತು. ನೀನೇಕೆ ಬಿಳಿ ಹುಡುಗಿಯನ್ನು ಮದುವೆಯಾಗಲು ಇಷ್ಟಪಡಲ್ಲ ಎಂದು ಕೇಳಿದಾಗ, ಅವನೇನು ಹೇಳಿದ ಗೊತ್ತಾ ಪಾಲ್, 'ಬಿಳಿ ಹುಡುಗಿಯೊಂದಿಗೆ ಗೆಳೆತನ ಮಾಡಬಹುದು, ಮದುವೆಯನ್ನಲ್ಲ. ಅವರು ತುಂಬಾ ಸ್ಪಷ್ಟವಾದಿಗಳು, ವ್ಯಕ್ತಿವಾದಿಗಳು, ಸ್ವತಂತ್ರರು ಮತ್ತು ಕೆಲವೊಮ್ಮೆ ಆಕ್ರಮಣಕಾರಿಗಳೂ ಆಗಿರುತ್ತಾರೆ' ಎಂದ.

ಅವನೊಂದಿಗೆ ವಾಸಿಸುತ್ತಿದ್ದ ಇಬ್ಬರು ಹುಡುಗರೂ ಅವನ ಮಾತನ್ನು ಅನುಮೋದಿಸಿದರು. ವಿದೇಶಿ ಜೀವನ ಪದ್ಧತಿಯಲ್ಲಿ ಬೆಳೆದ ಏಷಿಯನ್ ಯುವಕ–ಯುವತಿಯರು ಸಾಹಸಿಗಳು ಮತ್ತು ಪರಿಶ್ರಮಿಗಳಾಗಿರುತ್ತಾರೆ. ಆದರೆ ಹೆಂಡತಿಯ ಬಗ್ಗೆ ಸುಮಾರಾಗಿ ಅವರ ಅಭಿಪ್ರಾಯದಲ್ಲಿ ವ್ಯತ್ಯಾಸ ಕಾಣಬರಲಿಲ್ಲ. ಅವರು ಈಗಲೂ ಸಹ, ಮೊದಲು ಮಹಿಳೆಯಾಗಿದ್ದು, ನಂತರ ಏನಾದರೂ ಆಗಿರಲಿ, ಅದರೆ ನಾಜೂಕು ಮತ್ತು ವಿನಮ್ರರಾಗಿರುವ, ತಮಗಿಂತ ಕಡಿಮೆ ಸಂಪಾದಿಸುವ ಮತ್ತು ತಮ್ಮ ಆದೇಶಗಳನ್ನು ಪಾಲಿಸುವ ಹುಡುಗಿಯರನ್ನು ಮದುವೆಯಾಗಲು ಬಯಸುತ್ತಾರೆ. ಅವರ ಇಂಥ ಯೋಚನೆಗೆ ಮತ್ತು ಅಭಿಪ್ರಾಯಕ್ಕೆ ನಾನೇನು ತಾನೇ ಹೇಳಲಿ?

'ಮಾಮಾ ಡಿಯರ್... ನಮ್ಮ ಬಳಿ ಮೂರು ಬೆಡ್ ರೂಮುಗಳಿವೆ. ನೀವು ಯಾವ ರೂಮಿನಲ್ಲಿ ಮಲಗಲು ಇಷ್ಟಪಡುತ್ತೀರ...?'

'ನಾನಿಲ್ಲಿ ಯಾರಿಗೂ ಡಿಸ್ಟರ್ಬ್ ಮಾಡಲು ಬಯಸುವುದಿಲ್ಲ' ಎಂದು ಆ ಹುಡುಗರನ್ನು ನೋಡುತ್ತಾ ಹೇಳಿದೆ, 'ನೀವು ಇರುವ ಹಾಗೆಯೇ ಇರಿ. ನಾನು ಡ್ರಾಯಿಂಗ್ ರೂಮಿನಲ್ಲಿ ಮಲಗುತ್ತೇನೆ'.

'ನೀವೇಕೆ ಡಾಯಿಂಗ್ ರೂಮಿನಲ್ಲಿ ಮಲಗಬೇಕು...' ಎಂದ ಕರತಾರ್.

'ಇದರಲ್ಲಿ ತೊಂದರೆಯ ಪ್ರಶ್ನೆಯೇ ಇಲ್ಲ. ನೀವಿಲ್ಲಿ ನಮ್ಮ ಅತಿಥಿಗಳು' ಮೀಯೊಂಗ್ ಹೇಳಿದ.

ನಾನು ಯೋಚಿಸಿ ಹೇಳಿದೆ, 'ಜೋಶ್, ನಾನು ನಿನ್ನ ರೂಮಿನಲ್ಲಿಯೇ ಇರುತ್ತೇನೆ.'

'ಸರಿ. ನೀವು ಮತ್ತು ನೀಲ್ ಬೆಡ್‌ನಲ್ಲಿ ಮಲಗಿ. ನಾನು ನೆಲಕ್ಕೆ ಏರ್ ಮ್ಯಾಟ್ರೆಸ್ ಹಾಕಿಕೊಳ್ತೀನಿ.'

ನಾನು ಜೋಶ್‌ನ ಕೋಣೆಯಲ್ಲಿ ನನ್ನ ಲಗ್ಗೇಜುಗಳನ್ನಿಟ್ಟೆ. ಪರ್ಸ್, ನೀಲ್‌ನ ಡೈಪರ್, ಅವನ ಫೀಡಿಂಗ್ ಬಾಟ್ಲಿಗಳು ಇತ್ಯಾದಿ...

ಜೋಶ್ ನನ್ನೊಂದಿಗೆ ಮಾತನಾಡುತ್ತಾ ಕಿಚನ್‌ಗೆ ಬಂದು ಹೋಗುತ್ತಿದ್ದ; ಸ್ವಲ್ಪ ಹೊತ್ತಿಗೇ ಅಡುಗೆ ಮಾಡಿ ಪ್ಲೇಟ್‌ನಲ್ಲಿ ಹಾಕಿ ಕೊಟ್ಟ. ನನಗೆ ಆಶ್ಚರ್ಯವಾಯಿತು. ಅವನನ್ನೇ ಎವೆಯಿಕ್ಕದೆ ನೋಡಿ ಹೇಳಿದೆ, 'ವಾಹ್!'

'ಮಾಮಾ, ನಿಮಗೇಕೆ ಇಷ್ಟು ಆಶ್ಚರ್ಯವಾಗುತ್ತಿದೆ. ನಾನು ಎಷ್ಟೋ ವರ್ಷಗಳಿಂದ ಅಡುಗೆ ಮಾಡುತ್ತಿದ್ದೇನೆ.'

ಎಷ್ಟೋ ವರ್ಷಗಳಿಂದ... ವಾಸ್ತವವಾಗಿ ನಮ್ಮ ಪರಿವಾರ ತುಂಬಾ ಶೀಘ್ರವೇ ಚದುರಿ ಹೋಗಿತ್ತು. ನಾವು ಭೇಟಿಯಾದಾಗ ಅಬ್ರಾಹಮ್‌ನ ವಿಷಯವೂ ಬರುತ್ತಿತ್ತು. ನಾನೇ ಜೋಶ್‌ನಲ್ಲಿ ಅವನ ತಂದೆಯ ಬಗ್ಗೆ ಕೇಳುತ್ತಿದ್ದೆ.

'ಡ್ಯಾಡಿ ತಮ್ಮ ಬಿಜಿನೆಸ್‌ನಲ್ಲಿ ಬಿಜಿಯಾಗಿದ್ದಾರೆ, ಮದ್ಯ ಮತ್ತು ತಮ್ಮ ಗರ್ಲ್ಸ್‌ಗಳೊಂದಿಗೂ ಮಜವಾಗಿದ್ದಾರೆ' ಜೋಶ್ ನಗುತ್ತಾ ತಲೆ ಕೊಡವಿಕೊಂಡ.

'ಅವರು ಈಗಲೂ ಹಿಂದಿನಂತೆಯೇ ಇದ್ದಾರಾ...?'

'ಡ್ಯಾಡಿ ಮತ್ತು ನಿಮ್ಮಲ್ಲಿ ಒಂದು ವ್ಯತ್ಯಾಸವಿದೆ... ನೀವು ಎಲ್ಲಾ ಕೆಲಸವನ್ನು ಒಂದು ನಿಯಮ ಮತ್ತು ಸಿದ್ಧಾಂತದಿಂದ ಮಾಡಲು ಬಯಸುತ್ತೀರ. ಡ್ಯಾಡಿ ನಿಯಮಗಳು, ಸಿದ್ಧಾಂತಗಳು ಮತ್ತು ಕಾನೂನನ್ನು ಕೇರೇ ಮಾಡಲ್ಲ. ಅವರ ಸ್ಟೈಲೇ ಬೇರೆ.'

'ನೀನು ನನ್ನನ್ನು ಡ್ಯಾಡಿಯೊಂದಿಗೆ ಹೋಲಿಕೆ ಮಾಡ್ತಿದ್ದೀಯ...?' ನನಗೆ ತುಂಬಾ ಆಶ್ಚರ್ಯವಾಯಿತು, 'ನಿನ್ನ ಡ್ಯಾಡಿ ನನಗೆ ಮೋಸ ಮಾಡಿದ್ದಾರೆ' ನಾನು ರೇಗಿದೆ.

ಜೋಶ್ ನನ್ನನ್ನು ತೀಕ್ಷ್ಣವಾಗಿ ನೋಡುತ್ತಾ ಹೇಳಿದ, 'ಆದರೆ ಡ್ಯಾಡಿ ನನಗೇನೂ ಮೋಸ ಮಾಡಿಲ್ಲ. ಅವರು ನನ್ನನ್ನು ನೋಡಿಕೊಳ್ಳುವುದು ತಮ್ಮ ಜವಾಬ್ದಾರಿ ಎಂದು ತಿಳಿದಿದ್ದಾರೆ.'

ನಾನು ನಿನಗೆ ಮೋಸ ಮಾಡಿರುವನೇ?

